17 ನೇ ಅಪರ ಲಘು ವ್ಯವಹಾರಗಳ ಹಾಗೂ ಎಸಿಎಂಎಂ ನ್ಯಾಯಾಲಯ, ಮೆಯೋಹಾಲ್ ವಿಭಾಗ,

ಬೆಂಗಳೂರು (ಎಸ್.ಸಿ.ಸಿ.ಎಚ್-21)

ಸಿಸಿ ಸಂಖ್ಯೆಃ 57188/2018

DW1

ದಿನಾಂಕಃ 22.02.2022 ರಂದು ಪ್ರಮಾಣೀಕರಿಸಲಾಯಿತು.

| | |
|---|---|
| ಹೆಸರುಃ | ಗಜೇಂದ್ರ |
| ತಂದೆಯ ಹೆಸರು | ಜ್ಞಾನಮೂರ್ತಿ |
| ವಯಸ್ಸು | 32 ವರ್ಷ |
| ವೃತ್ತಿ | ಡೆಲಿವರಿ ಬಾಯ್ |
| ವಾಸಃ | ಎಲೆಕ್ಟ್ರಾನ್ ಸಿಟಿ, ಬೆಂಗಳೂರು |

ಮುಖ್ಯ ವಿಚಾರಣೆ ಅರೋಪಿ ಪರ ವಕೀಲರಿಂದಃ

**1.** 2008 ರಲ್ಲಿ ನಾನು ಅನಿವೇಲ್ ಕಂಪನಿಯಲ್ಲಿ ಗುತ್ತಿಗೆದಾರನಾಗಿ ಕೆಲಸ ಮಾಡುತ್ತಿದ್ದೇನು. ಅ ಸಮಯದಲ್ಲಿ ನನಗೆ ಪಿರ್ಯಾದುದಾರರು, ಜಾಕ್ ಸನ್ ಹಾಗೂ ಸಂಜಯ್ ರವರ ಪರಿಚಯವಾಗುತ್ತದೆ. ಮೊದಲು ನಾನು ಇತರೇ ಸ್ನೇಹಿತರೊಂದಿಗೆ ಸೇರಿಕೊಂಡು ವ್ಯವಹಾರ ನಡೆಸುತ್ತಿದ್ದೇನು. ಅ ನಂತರ ನಾನು ಒಬ್ಬನೇ ಟ್ಯೂಬ್ ಲೈಟ್ ಚಾಕ್ ವ್ಯವಹಾರವನ್ನು ಮಾಡುತ್ತಿದ್ದೇನು. ಅ ನಂತರ ಪಿರ್ಯಾದುದಾರರು ನನ್ನ ಬಳಿ 2015 ರಲ್ಲಿ ಪಾರ್ಟ್ ಟೈಮ್ ಕೆಲಸ ಏನು ಮಾಡುತ್ತಿದಿ್ದೀರಿ ಎಂದು ವಿಚಾರಿಸಿದಾಗ ನಾನು ಅವರಿಗೆ ನನ್ನ ಕೆಲಸದ ಬಗ್ಗೆ ತಿಳಿಸಿದೆನು. ಅ ಸಮಯದಲ್ಲಿ ಅವರು ನನ್ನ ವ್ಯವಹಾರದಲ್ಲಿ ಇನ್ ವೆಸ್ಟ್ ಮಾಡುತ್ತೇನೆಂದು ನನಗೆ ಲಾಬ ಕೊಡಿಯೆಂದು ತಿಳಿಸಿದರು. ಅದರಂತೆ ಪಿರ್ಯಾದುದಾರರು ನಾನು ನಡೆಸುತ್ತಿದ್ದ ವ್ಯವಹಾರದಲ್ಲಿ ಹಣ ಹೂಡಿಕೆ ಮಾಡಿದರು. ಸದರಿ ವ್ಯವಹಾರದಲ್ಲಿ ಬಂದ ಲಾಬವನ್ನು ನಾನು 3 ವರ್ಷದವರೆಗೆ ಪಿರ್ಯಾದುದಾರರು ಹೂಡಿಕೆ ಮಾಡಿದ ಹಣಕ್ಕೆ ಸಂಬಂದಿಸಿದಂತೆ ಅವರಿಗೆ ನೀಡಿರುತ್ತೇನೆ. ಮಾರ್ಕೆಟ್ ನಲ್ಲಿ ಹೊಸ ವಸ್ತುಗಳು 2017 ರಲ್ಲಿ ಬಂದ ಕಾರಣ ನಾನು ನಡೆಸುತ್ತಿದ್ದ ವ್ಯವಹಾರದ ವಸ್ತುಗಳಿಗೆ ಬೇಡಿಕೆ ಕಡಿಮೆಯಾಯಿತು. ಇದರಿಂದ ನನ್ನಗೆ ವ್ಯವಹಾರದಲ್ಲಿ ನಷ್ಟ ಉಂಟಾಯಿತು. 2018 ರಲ್ಲಿ ಪಿರ್ಯಾದುದಾರರು ನನ್ನ ವ್ಯವಹಾರದಲ್ಲಿ ಹೂಡಿಕೆ ಮಾಡಿದ್ದ ಹಣವನ್ನು ಅವರಿಗೆ ಹಿಂದುರುಗಿಸಲು ನನ್ನನ್ನು ಕೇಳಿದರು. ನಾನು ವ್ಯವಹಾರದಲ್ಲಿ ಹಾಕಿದ್ದ ಹಣ ಹಾಗೂ ಪಿರ್ಯಾದುದಾರರು ಸದರಿ ವ್ಯವಹಾರದಲ್ಲಿ ಹಾಕಿದ್ದ ಹಣ ನಷ್ಟ ಉಂಟಾದ ಕಾರಣ ಪಿರ್ಯಾದುದಾರರಿಗೆ ಹಣ ಹಿಂದುರುಗಿಸಲು ಅಗಲಿಲ್ಲ.

2. ಪಿರ್ಯಾದುದಾರರ ಬಳಿ ನಾನು ಹಣವನ್ನು ಕೈ ಸಾಲವಾಗಿ ಯಾವತ್ತು ಪಡೆದುಕೊಂಡಿರಲಿಲ್ಲ. 2018 ರಲ್ಲಿ ಪಿರ್ಯಾದುದಾರರು ಬೇರೆಯವರಿಗೆ ವ್ಯವಹಾರದ ಬಗ್ಗೆ ತಿಳಿಸುವ ಸಲುವಾಗಿ ನನ್ನ ಬಳಿ ಚೆಕ್ಕು ನೀಡಿ ಎಂದು ಹಾಗೂ ಅದನ್ನು ನಾನು ಅ ನಂತರ ಹಿಂದುರುಗಿಸುತ್ತೇನೆಂದು ತಿಳಿಸಿ ನನ್ನಿಂದ ಚೆಕ್ಕನ್ನು ಕೇಳಿದರು. ಅದರಂತೆ ನಾನು ಪಿರ್ಯಾದುದಾರರಿಗೆ ಎಲ್ಲಾ ಬರವಣಿಗೆಯನ್ನು ಮಾಡಿ ಹಾಗೂ ಸಹಿ ಮಾಡಿದ ಚೆಕ್ಕನ್ನು ಕೇವಲ ರೆಪರೆನ್ಸ್ ಸಲುವಾಗಿ ನೀಡಿದ್ದೇನು. ಪಿರ್ಯಾದುದಾರರು ಅವರ ಸ್ನೇಹಿತರಿಗೆ ನಾನು ನೀಡಿದ್ದ ಚೆಕ್ಕನ್ನು ತೋರಿಸಿ ಅದನ್ನು ಹಿಂದುರುಗಿಸುತ್ತೇನೆಂದು ನನಗೆ ತಿಳಿಸಿದರು. ಪಿರ್ಯಾದುದಾರರು ನಾನು ನೀಡಿದ ಚೆಕ್ಕನ್ನು ನನಗೆ ಹಿಂದುರುಗಿಸಲಿಲ್ಲ. ಸದರಿ ಚೆಕ್ಕನ್ನು ಪಿರ್ಯಾದುದಾರರು ಬ್ಯಾಂಕಿಗೆ ಹಾಜರು ಪಡಿಸಿದರು. ನನಗೆ ವ್ಯವಹಾರದಲ್ಲಿ ನಷ್ಟ ಉಂಟಾದ ಕಾರಣ ಪಿರ್ಯಾದುದಾರರಿಗೆ ಹಣ ಹಿಂದುರುಗಿಸಲು ಅಗುವುದಿಲ್ಲ. ಪಿರ್ಯಾದುದಾರರು ನನ್ನ ವ್ಯವಹಾರದಲ್ಲಿ ಹೂಡಿಕೆ ಮಾಡಿದ ಹಣಕ್ಕೆ ನಾನು ಅವರಿಗೆ ಲಾಬಾವಾಗಿ ಹಣವನ್ನು ನೀಡಿರುತ್ತೇನೆ. ನಾನು ಪಿರ್ಯಾದುದಾರರಿಂದ ಯಾವುದೇ ಸಾಲವನ್ನು ಪಡೆದುಕೊಂಡಿಲ್ಲ. ನನ್ನ ವಿರುದ್ದ ಪಿರ್ಯಾದುದಾರರು ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ. ಅ ಕಾರಣದಿಂದ ನನ್ನನ್ನು ಬಿಡುಗಡೆ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

<u>ಪಾಟೀ ಸವಾಲು ಪಿರ್ಯಾದುದಾರರ ಪರ ವಕೀಲರಿಂದಃ</u>

3. 2018 ರಲ್ಲಿ ಒಟ್ಟು ನಾನು 3 ಚೆಕ್ಕನ್ನು ಕೊಟ್ಟಿದ್ದೇನು. ಸದರಿ ಮೂರು ಚೆಕ್ಕುಗಳನ್ನು ನಾನು ಒಂದು ಚೆಕ್ಕು ಪಿರ್ಯಾದುದಾರರಿಗೆ, ಇನ್ನೊಂದು ಚೆಕ್ಕು ಜಾಕ್ ಸನ್ ರವರಿಗೆ ಹಾಗೂ ಉಳಿದ ಒಂದು ಚೆಕ್ಕನ್ನು ಸಂಜಯ್ ರವರಿಗೆ ನೀಡಿದ್ದೇನು. ಮೇಲೆ ತಿಳಿಸಿದವರಿಗೆ ಎಷ್ಟು ಮೊತ್ತ ನಮೂದಿಸಿ ಚೆಕ್ಕನ್ನು ನೀಡಿದ್ದೇನು ನನಗೆ ನೆನಪು ಇಲ್ಲ. 2018 ರಲ್ಲಿ ಚೆಕ್ಕನ್ನು ನೀಡಿದ ಬಳಿಕ ನನ್ನ ಮನೆಯವರು ನನ್ನ ವಿರುದ್ದ ನಾನು ಕಾಣೆಯಾಗಿರುತ್ತೇನೆಂದು ಪೋಲೀಸರಿಗೆ ದೂರನ್ನು ನೀಡಿದ್ದರು ಎಂದರೆ ಸರಿ. ಪಿರ್ಯಾದುದಾರರ ಹಾಗೂ ಅವರ ಇಬ್ಬರು ಸ್ನೇಹಿತರ ಬಳಿಯಿಂದ ನಾನು ಎಷ್ಟು ಮೊತ್ತಗಳನ್ನು ಪಡೆದುಕೊಂಡಿದ್ದೇನು ನನಗೆ ಹೇಳಲು ಅಗುವುದಿಲ್ಲ. ನಾನು ಹಣವನ್ನು ಪಡೆದುಕೊಂಡ ಹಾಗೂ ನೀಡಿದ ಬಗ್ಗೆ ಮೇಲ್ ನ ಮೂಲಕ ತಿಳಿಸುತ್ತಿದ್ದೇನು. ಅದೇ ರೀತಿ ಪಿರ್ಯಾದುದಾರರಿಂದ ಪಡೆದ ಚೆಕ್ಕು ಕೇವಲ ರೆಪರೆನ್ಸ್ ಸಲುವಾಗಿ ಎನ್ನುವ ಬಗ್ಗೆ ಅವರಿಂದ ಯಾವುದೇ ದಾಖಲೆ ಅನ್ನು ಪ ಡೆದುಕೊಂಡಿಲ್ಲ. ಪಿರ್ಯಾದುದಾರರಿಗೆ ಮೂರು ವರ್ಷದ ತನಕ ಲಾಬದ ಹಣ ನಾನು ಅನ್ ಲೈನ್ ಮೂಲಕ ವರ್ಗಾವಣೆ ಮಾಡುತ್ತಿದ್ದೇನು. ಅದಕ್ಕೆ ಸಂಬಂದಿಸಿದ ದಾಖಲೆ ಹಾಜರು ಪಡಿಸಿರುವುದಿಲ್ಲ. ಅದನ್ನು ಈಗ ಹಾಜರು ಪಡಿಸಲು ತುಂಬಾ ದಿವಸ ಅದ ಕಾರಣ ಅಗುವುದಿಲ್ಲ.

4. ಪಿರ್ಯಾದುದಾರಿಗೆ ಚೆಕ್ಕನ್ನು ನಾನು ಕೇವಲ ರೆಫರೆನ್ಸ್ ಸಲುವಾಗಿ ನೀಡಿದ್ದೆ ಎಂದು ಈ ಪ್ರಕರಣ ಸಲ್ಲಿಸಿದ ನಂತರ ಅವರಿಗೆ ನೋಟೀಸು ನೀಡಿರುವುದಿಲ್ಲ ಹಾಗೂ ಪೋಲೀಸರಿಗೂ ಯಾವುದೇ ದೂರನ್ನು ನೀಡಿರುವುದಿಲ್ಲ. 2018 ರಲ್ಲಿ ಈ ಪ್ರಕರಣವನ್ನು ಪಿರ್ಯಾದುದಾರರು ದಾಖಲಿಸಿದ ನಂತರ ನಾನು ಪಿರ್ಯಾದುದಾರರಿಗೆ ಯಾವುದೇ ನೋಟೀಸನ್ನು ನೀಡಿರುವುದಿಲ್ಲ. 2018 ರಲ್ಲಿ ನಾನು ದೂರಿನಲ್ಲಿ ತಿಳಿಸಿರುವ ವಿಳಾಸದಲ್ಲಿ ವಾಸಿಸುತ್ತಿದ್ದೇನು ಎಂದರೆ ಸರಿ. ಪಿರ್ಯಾದುದಾರರಿಗೆ ಹಣವನ್ನು ಹಿಂದಕ್ಕೆ ಕೊಡಬೇಕಾಗುತ್ತದೆಂದು ನನಗೆ ವ್ಯವಹಾರದಲ್ಲಿ ನಷ್ಟವಾಗಿರುತ್ತದೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಸಹೋದರರ ಮೂಲಕ ನಾನು ಕಾಣೆಯಾದ ಬಗ್ಗೆ ದೂರನ್ನು ಕೊಡಿಸಿರುತ್ತೇನೆಂದರೆ ಸರಿಯಲ್ಲ. ನನ್ನ ವ್ಯವಹಾರದಲ್ಲಿ ನಷ್ಟ ಉಂಟಾದ ಬಗ್ಗೆ ತೋರಿಸಲು ದಾಖಲೆ ಹಾಜರು ಪಡಿಸಿಲ್ಲ. ಪಿರ್ಯಾದುದಾರರಿಗೆ ನೀಡಬೇಕಾಗಿದ್ದ ಹಣವನ್ನು ನಾನೇ ವಿವಾದಿತ ಚೆಕ್ಕಿನಲ್ಲಿ ಬರೆದು ಅವರಿಗೆ ನೀಡಿದ್ದೇನು ಎಂದರೆ ಸರಿಯಲ್ಲ. ಪಿರ್ಯಾದುದಾರರಿಗೆ ಕಾನೂನು ಬದ್ದವಾಗಿ ನೀಡಬೇಕಾದ ಹಣವನ್ನು ತಪ್ಪಿ ಸುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆಂದರೆಸ ರಿಯಲ್ಲ.

5. 2018 ರಲ್ಲಿ ಪಿರ್ಯಾದುದಾರರು ವಕೀಲರ ಮೂಲಕ ಕಳುಹಿಸಿದ ನೋಟೀಸನ್ನು ನಾನು ಮನೆಯಲ್ಲಿ ಇದ್ದು ಪಡೆದುಕೊಳ್ಳದೇ ಹಿಂದುರುಗಿಸಿರುತ್ತೇನೆಂದರೆ ಸರಿಯಲ್ಲ. ಅ ಕಾರಣದಿಂದ ನೋಟೀಸು ಪಡೆದಿರುವುದಿಲ್ಲ ಎನ್ನುವ ಹಿಂಬರಹವನ್ನು ಅಂಚೆ ಇಲಾಖೆಯವರು ನೀಡಿರುತ್ತಾರೆಂದರೆ ಸರಿಯಲ್ಲ. ಪಿರ್ಯಾದುದಾರರಿಗೆ ಲಾಬದ ಹಣವನ್ನು ನೀಡಿರುವ ಸಂಬಂದ ಇಮೇಲ್ ದಾಖಲೆಗಳು ತುಂಬಾ ದಿವಸವಾದ ಕಾರಣ ನೀಡಲು ಅಗುವುದಿಲ್ಲ. ಪಿರ್ಯಾದುದಾರರಿಗೆ ನೀಡಬೇಕಾದ ಹಣವನ್ನು ತಪ್ಪಿ ಸುವ ಉದ್ದೇಶದಿಂದ ನಷ್ಟವಾಗಿದೆಯೆಂದು ಸುಳ್ಳು ಹೇಳುತ್ತಿದ್ದೇನೆಂದರೆಸ ರಿಯಲ್ಲ.
ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಒ ಹೇ ಕೇ ಸ ಇದೆ

17 ನೇ ಅಪರ ನ್ಯಾಯಾಧೀಶರು
ಮತ್ತು ಎಸಿಎಂಎಂ